ಅಷ್ಟು ಮಾತ್ರವಲ್ಲದೆ, 'ದತ್ತ ರಾಮ ಬೇಂದ್ರೆ', 'ಗಿಣಿರಾಮ', 'ನಿರೀಕ್ಷಕ', 'ಶಿಷ್ಯ' ಸೇರಿದಂತೆ ಹಲವು 'ಕಾವ್ಯನಾಮ'ಗಳಲ್ಲಿ ಗದ್ಯ ಬರಹಗಳನ್ನು ಪ್ರಕಟಿಸಿದ್ದಾರೆ. ಅವರ ಇಂಗ್ಲಿಷ್ ಕವಿತೆಗಳು 'Ben Ram Son' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಅಂಬಿಕಾತನಯದತ್ತ ಮಾತ್ರ ಗದ್ಯ ಬರೆಯಲೇ ಇಲ್ಲ. 'ಸ್ವಧರ್ಮ' (1926), 'ಜಯಕರ್ನಾಟಕ' (1929) ಮತ್ತು 'ಜೀವನ' (1938) ಪತ್ರಿಕೆಗಳ ಸಂಪಾದಕರಾಗಿದ್ದ ಅವಧಿಯಲ್ಲಿ ಬೇಂದ್ರೆಯವರು ಬೇರೆ ಬೇರೆ ಹೆಸರುಗಳಲ್ಲಿ ತಮ್ಮ ಬರಹಗಳನ್ನು ಪ್ರಕಟಿಸಿದ್ದಾರೆ.


ಸ್ಥೂಲವಾಗಿ ಭಾವನಾತ್ಮಕ ಅಥವಾ ಸೃಜನಶೀಲ ರಚನೆಗಳು 'ಅಂಬಿಕಾತನಯದತ್ತ' ಅವರದ್ದಾದರೆ, ಅನುವಾದ, ನಾಟಕ, ವಿಮರ್ಶೆ, ಸಂಶೋಧನೆ, ಹರಟೆ-ಕತೆಗಳಂತಹ ಬೌದ್ಧಿಕ ಬರಹಗಳನ್ನು 'ದ.ರಾ. ಬೇಂದ್ರೆ' ಹೆಸರಿನಲ್ಲಿ ಪ್ರಕಟಿಸಿದ್ದಾರೆ ಎಂಬ ನಿರ್ಧಾರಕ್ಕೆ ಬರಬಹುದು.

ಬೇಂದ್ರೆಯವರು ಪ್ರಕಟಿಸಿದ ಒಟ್ಟು ನಾಟಕಗಳ ಸಂಖ್ಯೆ 14. ಅವು ರಚನೆಯಾದ ಕ್ರಮ ಹೀಗಿದೆ: 'ಗೋಲ್' (1920), 'ತಿರುಕರ ಪಿಡುಗು' (1924), 'ಸಾಯೋ ಆಟ' (1925), 'ಜಾತ್ರೆ' (1934), 'ಹಳೆಯ ಗೆಣೆಯರು' (1934), 'ದೆವ್ವನ ಮನೆ' (1936), 'ನಗೆಯ ಹೊಗೆ' (1936), 'ಉದ್ಧಾರ' (1947), 'ಮಂದೀ ಮದಿವಿ' (1949), 'ಮಂದೀ ಮಕ್ಕಳು' (1949), 'ಶೋಭನಾ' (1958), 'ಮಕ್ಕಳು ಅಡಿಗೀಮನೆ ಹೊಕ್ಕರೆ' (1976), 'ಆ ಥರಾ ಈ ಥರಾ' (1980) ಹಾಗೂ 'ಮಂದೀ ಮನಿ' (1981).

ಅಂದರೆ 'ಅಂಬಿಕಾತನಯದತ್ತ'ರು ಕವನ ರಚಿಸುತ್ತಿದ್ದ ಕಾಲದಲ್ಲಿಯೇ ಬೇಂದ್ರೆಯವರು ನಾಟಕ ರಚನೆಗಳಲ್ಲಿ ತೊಡಗಿಸಿಕೊಂಡಿದ್ದರು. ಈ ನಾಟಕಗಳು ರಚಿಸಿದ ರೀತಿಯಲ್ಲಿ ಅಂದರೆ ಅನುಕ್ರಮವಾಗಿ ಪ್ರಕಟವಾಗಲಿಲ್ಲ.

ಬೇಂದ್ರೆಯವರ ನಾಟಕಗಳ ಪಟ್ಟಿಯಲ್ಲಿ 'ಮಿಸ್ ಫಾರ್ಚ್ಯೂನ್' (1983) ಹಾಗೂ 'ಕರೇ ಹೆಂಡತಿ ಆದರೆ ಖರೆ ಹೆಂಡತಿ' (1993) ಎಂಬ ಎರಡು ನಾಟಕಗಳು ಕೂಡ ಸೇರಿವೆ. ಆದರೆ, ಈ ಎರಡೂ ನಾಟಕಗಳನ್ನು ರಚಿಸಿದವರು ಪ್ರೊ. ಕೆ.ಎಸ್. ಶರ್ಮ ಮತ್ತು ಎನ್ಕೆ ಕುಲಕರ್ಣಿ. ಇವು 'ಬೇಂದ್ರೆಯವರ ಮಾನಸ ನಾಟಕಗಳು'. ಅಂದರೆ ಬೇಂದ್ರೆಯವರು ಕಲ್ಪಿಸಿದ, ಆದರೆ ಶರ್ಮ ಮತ್ತು ಎನ್ಕೆ ಅವರು ರಚಿಸಿದ ನಾಟಕಗಳು. ವಸ್ತು-ಕತೆ ಬೇಂದ್ರೆಯವರದ್ದಾದರೆ, ಅದನ್ನು ಅಕ್ಷರ ರೂಪಕ್ಕೆ ಇಳಿಸಿದವರು ಬೇರೆಯವರು.

ಬೇಂದ್ರೆಯವರು 1940ರಲ್ಲಿ 'ತಲೆದಂಡ' ಎಂಬ ನಾಟಕ ಬರೆಯಲು ಉದ್ದೇಶಿಸಿದ್ದರು. ಆದರೆ, ಅದು ಪೂರ್ಣಗೊಳ್ಳಲಿಲ್ಲ. ಆದರೆ 'ತಲೆದಂಡ'ಕ್ಕಾಗಿ


೯

ಗ್ರಂಥಮಾಲೆಯಲ್ಲಿ ಮುಂದೆ ಬರುವ

ಸಾಹಿತ್ಯ ನಿರ್ಮಾಣದ ರೂಪರೇಷೆ

ಕಾದಂಬರಿಗಳು

೧ ಮಾನಸಪುತ್ರ (ಸಾಮಾಜಿಕ ಕಾದಂಬರಿ) .... ದ. ರಾ. ಬೇಂದ್ರೆ
೨ ಮಿಂಚಿನಾಪುರಮಲ್ಲ (ಸಾಹಸ ಜೀವನಚಿತ್ರ) ... 'ಗುರುರಾಜ'
೩ ತಾಯಿ ('ಪರ್ಲ್‌ಬಕ್ಸ್'ಳ ಕಾದಂಬರಿಯ ಆಧಾರದಿಂದ) ಕೃಷ್ಣ ಕುಮಾರ
೪ ಸಮರಸವೇ ಜೀವನ (ಇಜ್ಜೋಡಿನ ಕೊನೆಯ ಭಾಗ) ವಿ. ಕೃ. ಗೋಕಾಕ
೫ ನಟಸಾರ್ವಭೌಮ (ಪೂರ್ತಿಮಾಡಿದ್ದು) .... 'ಕೃ'
೬ ಮೂಕಬಲಿ (ಸಾಮಾಜಿಕ ಕಾದಂಬರಿ) .... ಜಡಭರತ.
೭ ಸಂಪಾದಕ (ಕಾದಂಬರಿ) ಜಡಭರತ.

ಅಲ್ಲದೆ

ಕನ್ನಡಸಾಹಿತ್ಯ ಪ್ರಯೋಗಮಂದಿರದಲ್ಲಿ
ಸಾಹಿತ್ಯಜ್ಞರ ಪ್ರಯೋಗಫಲವಾಗಿ
'ಒಂದು ಕಾದಂಬರಿ'
ಹೊರಕ್ಕೆ ಬರಲಿದೆ.

ಮತ್ತು

ಐತಿಹಾಸಿಕ ಒಂದು ಸ್ವತಂತ್ರ ಮಹಾಕಾದಂಬರಿಯೂ
ಮುದ್ರಣಕ್ಕಾಗಿ ಸಿದ್ಧವಾಗುತ್ತಲಿದೆ.

ಬರೆದ 'ತುಂಬಿ ಬಂದಿತ್ತ...' ಹಾಡು 1937ರಲ್ಲಿ ಪ್ರಕಟಿಸಿದ 'ಸಖೀಗೀತ' ಸಂಕಲನದಲ್ಲಿ ಸೇರಿದೆ. ಪದ್ಯದ ಸಂದರ್ಭವನ್ನು ಹೀಗೆ ವಿವರಿಸಿದ್ದರು: "ಈ ಹಾಡು ಬಸವಣ್ಣನವರ ಜೀವನದ ಕೊನೆಯ ದಿನಗಳಿಗೆ ಸಂಬಂಧಿಸಿದ 'ತಲೆದಂಡ' ಎಂಬ ನಾಟಕದೊಳಗಿನದು. ರಾಯಮುರಾರಿಯ ಕಣ್ಣೆದಿರು ಬಸವಣ್ಣನವರ ಸಮಾಧಿಯ ಕೆಲಸ ನಡೆದಿರುವಾಗ ಮುದುಕ ಜಂಗಮನೊಬ್ಬನು ತನ್ನ ಸ್ವಾನುಭವದ ಈ ಹಾಡನ್ನು ಹೇಳುತ್ತಿರುವನು. ರಾಯಮುರಾರಿಗೆ ಅದು ಬಿಜ್ಜಳ ಬಸವಣ್ಣನವರ ಚರಿತೆಗೂ ಕಾಲಕ್ಕೂ ಅನ್ವಯಿಸುವದೆಂದು ತೋರುವದು. ಸುತ್ತಲಿದ್ದವರಿಗೂ, ಸಭಿಕರಿಗೂ ಹಾಗೆಯೇ ತೋರುವದು. 'ತಲೆದಂಡ'ದ ಕೊನೆಯ ಪದ್ಯವೇ ಇದು. ಇದರೊಳಗಿನ ಮೂರು